


## ಗನ್ನೆ ಕೆ ದೂಧ್

ನಾವಾಗ ಮಹಾರಾಷ್ಟ್ರದ ಜಲಗಾಂವ್‌ನಲ್ಲಿದ್ದೆವು. ಅಲ್ಲಿನ ಭಾಷೆ ಮರಾಠಿ. ವ್ಯವಹಾರಕ್ಕೆ ಹಿಂದಿ ಭಾಷೆಯೂ ನಡೆಯುತ್ತಿತ್ತು. ನಾನು ಹಿಂದಿಯಲ್ಲೆ ಮಾತಾಡುತ್ತಿದ್ದೆ. ಮನೆಯ ಹತ್ತಿರ ಒಂದು ಚಿಕ್ಕ ಕಬ್ಬಿನ ಗಾಣವಿತ್ತು. ಒಂದು ಸಂಜೆ ಕಬ್ಬಿನಹಾಲು ಮನೆಗೆ ತಂದು ಕುಡಿಯಲೆಂದು ಬಾಟಲ್ ತೆಗೆದುಕೊಂಡು ಹೊರಟೆ. ಅಂಗಡಿಯಲ್ಲಿ ವ್ಯಾಪಾರ ಜೋರಾಗಿತ್ತು. 'ಏಕ್ ಲೀಟರ್ ಗನ್ನೆ ಕೆ ದೂಧ್ ದೀಜಿಯೆ' ಎಂದು ಹೇಳಿದ ಮಾತು ಕೇಳಿಯೇ ಇಲ್ಲವೆನ್ನುವಂತೆ ಕೈ ಮಾಡಿದ ಅಂಗಡಿಯಾತ. ನನ್ನ ಕೈಯಲ್ಲಿದ್ದ ಬಾಟಲ್ ತೋರಿಸಿ ಪುನರುಚ್ಚರಿಸಿದೆ. 'ಇಲ್ಲಿ ಸಿಗುವುದಿಲ್ಲ, ಹಿಂದುಗಡೆ ಅಂಗಡಿಯಲ್ಲಿ ಕೇಳಿ' ಹಿಂದಿ ಮಿಶ್ರಿತ ಮರಾಠಿಯಲ್ಲಿ ಅವನು ಹೇಳಿದ. ಹಿಂದೆ ಹೋಗಿ ನೋಡಿದರೆ ಅಲ್ಲಿರುವುದು ಹಾಲಿನ ಡೈರಿ! ನನಗೆ ಸಿಟ್ಟುಕ್ಕಿ ಬಂತು. ಮತ್ತೆ ಅವನೆದುರಿಗೇ ನಿಂತೆ! 'ನಾನು ಕೇಳಿದ್ದು ಈ ಕಬ್ಬಿನ ಹಾಲು, ಹಾಲಿನ ಡೈರಿಗೆ ಕಳಿಸಿ ತಮಾಷೆ ನೋಡ್ತಿದೀರಾ?' ಸ್ವಲ್ಪ ಜೋರಾಗೆ ಇತ್ತು ನನ್ನ ದನಿ. ಗ್ಲಾಸ್‌ಗಳಿಗೆ ಕಬ್ಬಿನಹಾಲು ಸುರುವುತ್ತಿದ್ದವ ನನ್ನೆಡೆಗೆ ನೋಡಿ, 'ಯೆ ಗನ್ನೆ ಕೆ ರಸ್ ಹೈ, ದೂಧ್ ನಹಿ' ಎಂದು ನಗಲಾರಂಭಿಸಿದಾಗ ನಾನು ಪೆಚ್ಚಾದೆ.

**ಮೇಧಾ ಭಟ್**

## ನಾನಂತೂ ಬರೆದಿಲ್ಲ

ನನ್ನ ಐದು ವರ್ಷದ ಮೊಮ್ಮಗಳು ಸಂಜನಾ ಮಾತಿನಲ್ಲಿ ಬಲು ಚೂಟಿ. ಅವಳೆಂದರೆ ಮನೆಯಲ್ಲಿ ಎಲ್ಲರಿಗೂ ಮುದ್ದು. ದಿನಾ ರಾತ್ರಿ ಊಟದ ವೇಳೆಗೆ ಡೈನಿಂಗ್ ಟೇಬಲ್ ಮುಂದೆ, ಅವಳ ಅಣ್ಣನಿಂದ ಸಾಮಾನ್ಯ ಜ್ಞಾನದ ಪ್ರಶ್ನಾವಳಿ ಕಾರ್ಯಕ್ರಮವಿರುತ್ತಿತ್ತು. ಕೇಳುವ ಪ್ರಶ್ನೆಗಳಿಗೆ ಅವಳು ಪಟಕ್ಕನೆ ಉತ್ತರಿಸುತ್ತಿದ್ದಳು. ಅಂದು ಕೂಡ ಅಣ್ಣ ಕೇಳಿದ ಮೂರ್ನಾಲ್ಕು ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದಂತೆ, 'ಪುಟ್ಟಿ, ಜನಗಣಮನ ಯಾರು ಬರೆದಿದ್ದಾರೆ ಹೇಳು?' ಎಂದು ಪ್ರಶ್ನಿಸಿದ. ನಾವೆಲ್ಲಾ ಅವಳ ಉತ್ತರವೇನಿರಬಹುದೆಂದು ಕುತೂಹಲದಿಂದ ನೋಡುತ್ತಿದ್ದೆವು. ಅವಳು ಒಂದು ಕ್ಷಣವೂ ತಡಮಾಡದೆ ಗಂಭೀರವಾಗಿ, 'ನಾನಂತೂ ಬರೆದಿಲ್ಲಪ್ಪಾ' ಎಂದು ಉತ್ತರಿಸಿದಳು!



**ಸ್ಮಿತಾ ಜೋಶಿ**

ಚಿತ್ರಗಳು: ಗಣೇಶ ಆಚಾರ್ಯ